ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಖಾಲಿ ಹುದ್ದೆಗಳ ಲಭ್ಯತೆಗೊಳಪಟ್ಟು ಮುಂದಿನ ಮೂರು ವರ್ಷಗಳೊಳಗೆ ನಿವೃತ್ತಿಯಾಗಲಿರುವ ನೌಕರರ ಆದ್ಯತೆಯ ಸ್ಥಳಗಳ ವರ್ಗಾವಣಾ ಕೋರಿಕೆಗಳನ್ನು ಸಾಮಾನ್ಯವಾಗಿ ಪರಿಗಣಿಸಿ ವರ್ಗಾವಣೆಗಳನ್ನು ಮಾಡತಕ್ಕದೆಂದು ದಿನಾಂಕ 28-4-95ರ ಅಧಿಕೃತ ಜ್ಞಾಪನದಲ್ಲಿ ಮಾರ್ಗಸೂಚನೆಗಳನ್ನು ನೀಡಲಾಗಿದೆ.

ಆ) ಹೌದು.

ಇ) ಹೌದು.

ರಾಜ್ಯದ ಕೆರೆಗಳ ಅಚ್ಚುಕಟ್ಟು

2412 - ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೆರೆಗಳೆಷ್ಟು?

ಆ) ಇವುಗಳ ಅಚ್ಚುಕಟ್ಟು ಪ್ರದೇಶವೆಷ್ಟು?

ಇ) ಸದರಿ ಕೆರೆಗಳ ಅಂಗಳಗಳ ಒತ್ತುವರಿಯಾಗಿವೆಯೆ, ಹಾಗಿದ್ದಲ್ಲಿ, ತೆರವು ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) 36,661.

ಆ) 6,8042 ಹೆಕ್ಟೇರ್‌ಗಳು.

ಇ) ಆಗಿದೆ. ಹಾನಗಲ್ ತಾಲ್ಲೂಕಿನಲ್ಲಿ ಶಾಡಂಬಿ ಕೆರೆ ಸರ್ವೆ ನಂ. 89 ಕೆರೆ ಅಂಗಳದಲ್ಲಿ

1. ಶ್ರೀ ಶಂಕ್ರಪ್ಪ ದ್ಯಾಮಪ್ಪ. ವಾಲಿಕಾರ ಸಾ: ಮಡ್ಲಿ ಶಿಗ್ಗಾಂವ್ ತಾಲ್ಲೂಕು.
2. ಶ್ರೀ ವೀರಭದ್ರಪ್ಪ ವಾಲಿಕಾರ ಸಾ: ಮಡ್ಲಿ ಶಿಗ್ಗಾಂವ್ ತಾಲ್ಲೂಕು.
3. ಶ್ರೀ ರುದ್ರಪ್ಪ ಬಡೀಗೇರ. ಸಾ: ಮಡ್ಲಿ ಶಿಗ್ಗಾಂವ್ ತಾಲ್ಲೂಕು.

ಈ ಮೂವರು ಬಗರ್ ಹುಕುಂ ಸಾಗುವಳಿ ಮಾಡುತ್ತಿರುವುದು ಕಂಡು ಬಂದಿದ್ದು, ಇವರಿಂದ ಅತೀಕ್ರಮಣ ಮಾಡಿದ ಕ್ಷೇತ್ರವನ್ನು ತೆರವು ಮಾಡಲು ಲೋಕೋಪಯೋಗಿ ಉಪ ವಿಭಾಗ, ಶಿಗ್ಗಾಂವ್ ಇವರು ದಿನಾಂಕ:26-8-95 ರಂದು ನೋಟೀಸ್ ಜಾರಿ ಮಾಡಿದ್ದು, ಹಾಗೂ ತಹಶೀಲ್ದಾರ್ ಶಿಗ್ಗಾಂವ್‌ರವರ ಕಾರ್ಯಾಲಯದಿಂದ ಸಂ: 4165 ದಿನಾಂಕ 12-12-95ರ ಪತ್ರ ಮುಖಾಂತರ ತೆರವು ಮಾಡಲು ನೋಟಿಸ್ ಜಾರಿ ಮಾಡಿದ್ದು ಇರುತ್ತದೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ಲೋಕೋಪಯೋಗಿ ನಂ.2 ಉಪ ವಿಭಾಗ, ಹಳಿಯಾಳ ಇವರಲ್ಲಿ (1) ಮಾವಿನಕೊಪ್ಪ ಕೆರೆ ಅಂಗಳದಲ್ಲಿ 44 ಎಕರೆ ಜಮೀನು ಅತೀಕ್ರಮಣವಾಗಿರುತ್ತದೆ. (2) ಕಾವಲವಾಡ ಕೆರೆ ಅಂಗಳದಲ್ಲಿ 2 ಎಕರೆ ಜಮೀನು ಅತೀಕ್ರಮಣವಾಗಿರುತ್ತದೆ. ಮಾವಿನಕೊಪ್ಪ ಕೆರೆ ಅಂಗಳದ ಅತೀಕ್ರಮಣ ಜಮೀನು ತೆರವು ಮಾಡಿಸಲು ದಿನಾಂಕ 21-11-1990 ರಂದು ತಹಶೀಲ್ದಾರ್ ಹಳಿಯಾಳ ಸಣ್ಣ ನೀರಾವರಿ ವಿಭಾಗಾಧಿಕಾರಿಗಳು ಸಭೆ ನಡೆಸಿ ಅತೀಕ್ರಮಣದಾರರಿಗೆ ತೆರವು ಮಾಡಲು ತಿಳಿಸಿದ್ದಾರೆ.

ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸರಬರಾಜು

2413 - ಶ್ರೀಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ದಿನ ಬಿಟ್ಟು ದಿನ ಕುಡಿಯುವ ನೀರಿನ ಸರಬರಾಜನ್ನು ಮಾಡುವುದು ನಿಜವಲ್ಲವೇ, ಈ ರೀತಿ ಸರಬರಾಜು ಮಾಡುವ ನೀರನ್ನು ಸರಿಯಾಗಿ ಬಿಡದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ನಿಜವಲ್ಲವೆ?

ಆ) ಈ ಪದ್ಧತಿಯನ್ನು ರದ್ದುಗೊಳಿಸಿ ಪ್ರತಿ ದಿನಾ ನೀರು ಬಿಡುವ ಕ್ರಮವನ್ನು ಜಾರಿಗೆ ತರಲಾಗುವುದೇ, ತರಲಾಗದಿದ್ದಲ್ಲಿ ಕಾರಣಗಳೇನು (ವಿವರ ನೀಡುವುದು)?

ಶ್ರೀ ಅನಂತನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :

ಅ) ದಿನ ಬಿಟ್ಟು ದಿನ ನೀರು ಸರಬರಾಜು ಮಾಡುತ್ತಿರುವುದು ನಿಜ. ದಿನ ಬಿಟ್ಟು ದಿನ ನೀರು ಕೊಡುವ ಪದ್ಧತಿಯಿಂದ ನಗರದ ಮಿತಿಯೊಳಗೆ ಇರುವ ಎಲ್ಲಾ ಜಲಾಶಯಗಳಿಗೂ ಹೆಚ್ಚಿನ ನೀರು ಸಂಗ್ರಹಣೆ ಆಗುವ ಕಾರಣದಿಂದ ನೀರನ್ನು ಸಾಕಷ್ಟು ಒತ್ತಡದಿಂದ ಎಲ್ಲಾ ಪ್ರದೇಶಗಳಿಗೂ ಕೊಡಲು ಸಾಧ್ಯವಾಗಿದೆ. ಈ ವ್ಯವಸ್ಥೆಯಿಂದ ಸಾಧಾರಣವಾಗಿ ಎತ್ತರದ ಪ್ರದೇಶದಲ್ಲಿರುವವರಿಗೆ, ತಗ್ಗು ಪ್ರದೇಶದಲ್ಲಿರುವವರಿಗೆ ಎಲ್ಲರಿಗೂ ಅನುಕೂಲವಾಗಿದೆ.

ಆ) ಬೆಂಗಳೂರು ನಾಗರೀಕರಿಗೆ ನೀರು ಸರಬರಾಜು ಮಾಡುವ ಮಹತ್ವದ ಜಲಾಶಯ -ಗಳಾದ ತಿಪ್ಪಗೊಂಡನಹಳ್ಳಿ ಮತ್ತು ಹೆಸರುಘಟ್ಟ ಜಲಾಶಯಗಳಲ್ಲಿ ನೀರಿನ ಮಟ್ಟ ತೀರ ಕಡಿಮೆ ಇರುವ ಕಾರಣ ಮಂಡಳಿಯು ಕಾವೇರಿ ಯೋಜನೆಯಿಂದ ಬರುವ ಕಾವೇರಿ ನೀರನ್ನೇ ಇಡೀ ಬೆಂಗಳೂರಿಗೆ ಸರಬರಾಜು ಮಾಡಬೇಕು. ಪ್ರತಿದಿನ ನೀರು ಸರಬರಾಜು ಮಾಡಲು ಸಾಕಷ್ಟು, ನೀರಿನ ಸಂಗ್ರಹ ಇಲ್ಲ. ಪ್ರತಿ ದಿನ ನೀರು ಬಿಟ್ಟರೆ ತಗ್ಗಿನ ಪ್ರದೇಶದಲ್ಲಿರುವವರಿಗೇ ನೀರು ದೊರಕುತ್ತದೆ. ಎತ್ತರದ ಪ್ರದೇಶದಲ್ಲಿರುವವವಿಗೆ ನೀರು ಹೋಗುವುದಿಲ್ಲ. ಆದ್ದರಿಂದ ಬೆಂಗಳೂರಿನ ನಾಗರೀಕರಿಗೆ ದಿನ ಬಿಟ್ಟು ದಿನ ನೀರು ಸರಬರಾಜು ಮಾಡಲಾಗುತ್ತಿದೆ.